# ಈ ಕಾಲದ ಕಥನ

ಹೊದ್ದು ಹಣ್ಣಿನ ತಟ್ಟೆ ಹೊತ್ತು ಥಕತ್ತೈ ನಲಿಯುತ್ತಿರುವ ನಮ್ಮ ಬರಹಗಾರರು.

ಹಾಗಾದರೆ ಓದು?

ಅದು ತನ್ನ ಪಾಡಿಗೆ ತಾನು ಸಾಗಿದೆ. ಏನಾದರೂ ಓದಬೇಕಲ್ಲ ಎಂದು ಇದ್ದುದರಲ್ಲಿ ನಮಗೀಗಾಗಲೇ ಗೊತ್ತಿರುವ ಲೇಖಕರನ್ನು, ಅಂಥ ಲೇಖಕರು ರೆಕಮಂಡ್ ಮಾಡಿರುವುದನ್ನು ಮಾತ್ರವೇ ಓದುತ್ತೇನೆ. ಭ್ರಮನಿರಸನ ಹೆಚ್ಚು, ನೀವೂ ಓದಿ ಎನ್ನಬೇಕು ಅನಿಸುವಂಥದ್ದು ಕಡಿಮೆ. ಇಲ್ಲವೇ ಇಲ್ಲವೆಂದಲ್ಲ, ಎಷ್ಟೋ ಬಾರಿ ನಿಮಗದು ಇಷ್ಟವಾಗುವುದಿಲ್ಲ ಎನ್ನುವುದು ಒಂದು ಕಾರಣ, ನನ್ನ ಇಷ್ಟಾನಿಷ್ಟಗಳು ಈ ಕಾಲಕ್ಕೆ ಹೊಂದುತ್ತಿಲ್ಲವೇನೊ ಎನಿಸುವುದು ಇನ್ನೊಂದು ಕಾರಣ. ಇನ್ನು ಪ್ರತಿಯೊಬ್ಬ ಓದುಗನೂ ಸ್ವತಃ ಬರಹಗಾರನೂ ಆಗಿರುವುದು ನೂರಕ್ಕೆ ನೂರು ನಿಶ್ಚಿತವಾಗಿರುವುದರಿಂದ ನಿಮ್ಮದು ಓದಿದೆ ಸರ್, ನನ್ನದು ಓದಿದ್ರಾ ಸರ್ ಎನ್ನುವಲ್ಲಿಗೇ ಇಂಥ ಮಾತುಕತೆಗಳು ನಿಲ್ಲುತ್ತವೆ.

ನೀವು ಹೇಳುವ ಪುರಾಣಗಳು, ಮಹಾಕಾವ್ಯಗಳು, ಜಾನಪದ ಕಥನಕಾವ್ಯಗಳು, ಸಿನಿಮಾ, ನಾಟಕ, ನೃತ್ಯಗಳು ಮತ್ತು ಈಗಿನ ಬಿಕ್ಕಟ್ಟುಗಳ ಸುತ್ತ ಇರಬಹುದಾದ ಶೋಷಣೆ, ರಾಜಕೀಯ, ಜಾತೀಯತೆ, ಭ್ರಷ್ಟಾಚಾರ, ಹಿಂಸೆಯ ಕಥನಗಳು ಯಾವ ಕಾಲಕ್ಕೂ ಸಲ್ಲುವಂಥಾವೇ. ಒಬ್ಬ ಓದುಗ ಎಲ್ಲ ಬಗೆಯ ಕಥನವನ್ನೂ ಸದಾ ಕುತೂಹಲಿಯಾಗಿ ಓದಲು ತಯಾರೇ. ಆದರೆ ಅಂಥ ಓದುಗನೇ ಮೈನಾರಿಟಿ ಆಗುತ್ತಿದ್ದಾನೆ ಎನ್ನುವುದು ಸದ್ಯದ ವಾಸ್ತವ ಎನಿಸುತ್ತಿದೆ. ಕೊನೆಗೆ ನಮ್ಮ ನಮ್ಮ ಓದು, ಪುಸ್ತಕ ಪ್ರೀತಿಗೆ ಕೂಡ ಪ್ರಚಾರದ ಗೀಳು ಮಾತ್ರವೇ ಪ್ರೇರಣೆಯಾಗುತ್ತಿದೆಯೇ, ನಿಜವಾದ ರಸಗ್ರಹಣ ಮುಕ್ಕಾಗುತ್ತಿದೆಯೇ ಎನ್ನುವುದು ನನಗಿರುವ ಅನುಮಾನ. ಪ್ರತಿಯೊಂದನ್ನೂ ಶೇರ್ ಮಾಡುವ, ಪ್ರತಿಯೊಂದರ ಕುರಿತೂ ನನ್ನೆದುರು ಮಾಧ್ಯಮದ ಮೈಕ್ ಇದೆಯೋ ಎಂಬಂತೆ ಮಾತನಾಡುವ ಚಾಳಿ ಇಂದಿನ ಸಹಜ ಧರ್ಮ. ಇದರೆಡೆಯಲ್ಲಿ ಇದನ್ನು ಓದಿ, ಅದನ್ನು ಓದಿ ಎನ್ನುವವರು, ನಾನು ಬರೆದಿದ್ದು ಓದಿ, ಅವರದ್ದನ್ನು ಓದಬೇಡಿ, ಕಚಡಾ ಇದೆ ಅದು ಎನ್ನುವವರ ನಡುವೆ ಮಾರುಕಟ್ಟೆಯ ಸರಕಾಗಿರುವ ಸಾಹಿತ್ಯ ಕೃತಿಯೊಂದನ್ನು ಸಾಹಿತ್ಯಿಕ ಕಾರಣಗಳಿಗಾಗಿ ಓದುವುದು, ಅದರ ಕುರಿತು ಮಾತನಾಡುವುದು ಸಾಧ್ಯವಾಗುವುದೇ ಎನ್ನುವುದೇ ನನ್ನ ಮುಂದಿರುವ ಬಹುದೊಡ್ಡ ಪ್ರಶ್ನೆ ಇಂದು. ರೆಕಮಂಡೇಶನ್ನುಗಳು, ಪ್ರಶಸ್ತಿಗಳು, ರಿವ್ಯೂಗಳು ನಂಬಲರ್ಹವಾಗಿವೆ ಅನಿಸುವುದಿಲ್ಲ. ಪತ್ರಿಕೆಗಳಲ್ಲಿ ಬರುವ ಪಟ್ಟಿ ಕೂಡ ಜಾಹೀರಾತಿನ ಪಸೆ ಪಡೆದಿರುತ್ತವೆ. ಹಾಗಿದ್ದೂ ನಾವು ಓದಲು ಬಯಸುವ ಕೃತಿಗಳು ಯಾವುವು ಎನ್ನುವ ಪ್ರಶ್ನೆ ತೀರ ವ್ಯಕ್ತಿಗತವೇ.

ತೀರ ಎಂದರೆ ತೀರ ಪ್ರಚಾರಕ್ಕೇ ಬಾರದ ಲೇಖಕನನ್ನು ಹುಡುಕಿ ಹುಡುಕಿ ಓದುವುದು ಈ ಕಾಲದ ಅಗತ್ಯ ಅನಿಸುತ್ತದೆ. ಅಂಥ ಸಾಕಷ್ಟು ಮಂದಿ ಇದ್ದಾರೆ. ಅವರು ಉತ್ಕೃಷ್ಟ ಸಾಹಿತ್ಯ ರಚಿಸಿಯೂ ಅನುವಾದಗೊಳ್ಳದೇ ಉಳಿದಿದ್ದಾರೆ. ಅವರ ಕೃತಿಗಳು ಮರು ಮುದ್ರಣಕ್ಕೆ ಹೋಗಿಲ್ಲ. ಪ್ರತಿಗಳು ಲಭ್ಯವಿಲ್ಲ. ಆದರೆ, ಅವರ ಬಗ್ಗೆ ಮಾತನಾಡುವ ಮಂದಿ ಅಲ್ಲಿ ಇಲ್ಲಿ ಇದ್ದಾರೆ ಎನ್ನುವುದೇ ಆಶಾಕಿರಣ.

ಮಂಗಳೂರಿನ ನರೇಂದ್ರ ಪೈ 'ಟಿಕ್ ಟಿಕ್ ಗೆಳೆಯ', 'ಕನಸುಗಳೇ ಮರಳಿ ಬನ್ನಿ' ಎಂಬ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಸಾಹಿತ್ಯದ ಕುರಿತಂತೆ ಹೊಸ ಮಾತುಗಳನ್ನು, ಹೊಸ ನೋಟಗಳನ್ನು ಕೊಡಬಲ್ಲ ವಿಮರ್ಶಕರು.